## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್ ಕೇಸ್: 54/2019

ಫ್ರಾಸಾ- 17

ಚಾಸಾ- 28

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಶಂಕರ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 36 ವರ್ಷ |
| ವೃತ್ತಿ | : | ಪಿಎಸ್ ಐ, ಬೆಟ್ಟದಪುರ ಪೊಲೀಸ್ ಠಾಣೆ ಮೈಸೂರು |
| ವಾಸ | : | ಬೆಟ್ಟದಪುರ, ಮೈಸೂರು. |

ಸಾಕ್ಷಿಯನ್ನು ದಿನಾಂಕ **23-08-2024** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ: **(Through V.C. in Jitsi meet app)**

ನಾನು ದಿನಾಂಕ 11-12-2018 ರಿಂದ 07-10-2020 ರವರೆಗೆ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20-10-2019 ರಂದು ಸಮಯ 10.30 ರಿಂದ 11.00 ಗಂಟೆಯವರೆಗೆ ಗಾಯಾಳು ಫ್ರಾಸಾ-1 ರವರ ಹೇಳಿಕೆಯನ್ನು ಮಾಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಮಾಡಿಕೊಂಡಿದ್ದು, ದಿನಾಂಕ 21-10-2019 ರಂದು 00.15 ಗಂಟೆಗೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಈಗ ನಾನು ನೋಡುತ್ತಿರುವ ಹೇಳಿಕೆ ನಾನು ಫ್ರಾಸಾ-1 ರವರಿಂದ ಪಡೆದುಕೊಂಡ ಹೇಳಿಕೆ ಆಗಿದ್ದು, ಅದನ್ನು ನಿಪಿ-1 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಪ್ರಥಮ ವರ್ತಮಾನ ವರದಿ ನಾನು ತಯಾರಿಸಿದ್ದ ಪ್ರಥಮ ವರ್ತಮಾನ ವರದಿ ಆಗಿದ್ದು, ಅದನ್ನು ನಿಪಿ-18 ಎಂದು

ಈಗಾಗಲೇ ಗುರುತಿಸಲಾಗಿದೆ. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-29 ರವರಿಗೆ ವರ್ಗಾಹಿಸಿರುತ್ತೇನೆ.

**ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:**

ಮಡಿಕೇರಿ ಜಿಲ್ಲಾ ಆಸ್ಪತ್ರೆಯಿಂದ ನನಗೆ ಪ್ರಕರಣದ ಬಗ್ಗೆ ಮಾಹಿತಿ ಬಂದಿತ್ತು. ಎಷ್ಟು ಗಂಟೆಗೆ ನನಗೆ ಮಾಹಿತಿ ಬಂದಿತ್ತು ಎಂದು ನೆನಪಿಲ್ಲ. ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಫ್ರಾಸಾ-1 ಎಷ್ಟು ಗಂಟೆಗೆ ದಾಖಲಾಗಿದ್ದರು ಎಂದು ನನಗೆ ನೆನಪಿಲ್ಲ. ಆ ದಿನ ನನಗೆ ಪ್ರಕರಣದ ಬಗ್ಗೆ ಮಾಹಿತಿ ಬರುವ ಸಂದರ್ಭದಲ್ಲಿ ನಾನು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಇದ್ದೆ. ಸೋಮವಾರಪೇಟೆಯಿಂದ ಮಡಿಕೇರಿಗೆ ಸುಮಾರು 40 ಕಿಲೋ ಮೀಟರ್ ದೂರ ಇದೆ. ನಾನು ರಾತ್ರಿ 10.15 ರಿಂದ 10.20 ರ ಸಮಾರಿಗೆ ಆಸ್ಪತ್ರೆಗೆ ತಲುಪಿರಬಹುದು. ಸೋಮವಾರಪೇಟೆಯಿಂದ ಮಡಿಕೇರಿಗೆ ತಲುಪಲು 45 ನಿಮಿಷ ಸಾಕು. ಸೋಮವಾರಪೇಟೆಯಿಂದ ಮಡಿಕೇರಿಗೆ ಬರಲು ಎರಡು ಗಂಟೆಗಳು ಬೇಕು ಎಂದರೆ ಸರಿಯಲ್ಲ.

ನಾನು ಪುನಃ ಠಾಣೆಗೆ ಬರುವ ಒಳಗೆ ಆರೋಪಿತನ ಹೆಂಡತಿ ಠಾಣೆಗೆ ಬಂದು ದೂರು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆಸ್ಪತ್ಟೆಗೆ ಬಂದ ಸಮಯದಲ್ಲಿ ಠಾಣಾಧಿಕಾರಿ ಮುಖ್ಯಪೇದೆ ಇದ್ದಿರುತ್ತಾರೆ ಆದರೆ ಅವರ ಹೆಸರು ನನಗೆ ನೆನಪಿಲ್ಲ. ಅದೇ ದಿನ ರಾತ್ರಿ 11.30 ಕ್ಕೆ ಆರೋಪಿಯ ಹೆಂಡತಿ ಠಾಣೆಗೆ ಬಂದು ಒಂದು ದೂರನ್ನು ನೀಡಿದ್ದು ಅದನ್ನು ಠಾಣಾಧಿಕಾರಿ ಪುಟ್ಟಪ್ಪ ಎಂಬುವವರು ಸ್ವೀಕರಿಸಿದ್ದಾರೆಎಂದರೆ ಸಾಕ್ಷಿ ಸ್ವೀಕರಿಸಿ ಮಾಹಿತಿ ತಿಳಿಸಿದ್ದರು ಎಂದುನುಡಿಯುತ್ತಾರೆ. ಸದರಿ ದೂರು ಹಾಗೂ ಸ್ವೀಕೃತಿಯನ್ನು ನಿಡಿ-3 ಹಾಗೂ ನಿಪಿ-4 ಎಂದು ಕ್ರಮವಾಗಿ ಗುರುತಿಸಲಾಯಿತು. ಈ ಪ್ರಕರಣದ ಪ್ರಥಮ ವರ್ತಮಾನ ವರದಿ ಆದ ನಂತರ ಸದರಿ ಪ್ರಕರಣದಲ್ಲಿ ನಾನು ನಮ್ಮ ಠಾಣೆಯಿಂದ ಎನ್.ಸಿ.ಆರ್ ನೀಡಲಾಗಿದೆ ಎಂದರೆ ಸಾಕ್ಷಿ ಎ.ಎಸ್.ಐ ರವರು ದೂರನ್ನು ಸ್ವೀಕರಿಸಿದ ಬಗ್ಗೆ ನನಗೆ ನೆನಪಿದೆ ಆದರೆ ಯಾವ ದಿನಾಂಕ ಮತ್ತು ಯಾವ ಸಮಯದಲ್ಲಿ ಎನ್.ಸಿ.ಆರ್ ನೀಡಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಬೇಕಾದಂತೆ ನಿಪಿ-1 ರಂತೆ ನಾನು ಹೇಳಿಕೆ ತಯಾರಿಸಿದ್ದೇನೆ ಮತ್ತು ಫ್ರಾಸಾ-1 ನನ್ನ ಎದುರು ಯಾವುದೇ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ